ಶ್ರೀ ಉಮೇಶ್.ವಿ.ಕತ್ತಿ(ಲೋಕೋಪಯೋಗಿ ಸಚಿವರು)

ಅ) 1998-99ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸಲಾದ ಅನುದಾನ ಯೋಜನೆಯಲ್ಲಿ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

(1) ರಸ್ತೆಗಳ ಅಭಿವೃದ್ಧಿ	-	2220
(2) ನಬಾರ್ಡ್ ಕಾಮಗಾರಿ	-	12000
(3) ಕಟ್ಟಡಗಳ ನಿರ್ಮಾಣ	-	7059

ಆ) 1998-99ನೇ ಸಾಲಿನಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಹಣ ಯೋಜನೆಯಡಿಯಲ್ಲಿ ಕೆಳಕಂಡಂತಿದೆ.

(1) ರಸ್ತೆಗಳ ಅಭಿವೃದ್ಧಿ	-	1028
(2) ನಬಾರ್ಡ್ ಕಾಮಗಾರಿಗಳು-		5992
(3) ಕಟ್ಟಡಗಳ ನಿರ್ಮಾಣ	-	2948

ಇ) ತಾ : 1.4. 1998ಕ್ಕೆ ಬಾಕಿ ಇದ್ದ ಬಿಲ್ಲುಗಳ ಮೊತ್ತ ಕೆಳಕಂಡಂತಿದೆ.

(1) ರಸ್ತೆಗಳ ಅಭಿವೃದ್ಧಿ	-	786.66
(2) ನಬಾರ್ಡ್ ಕಾಮಗಾರಿಗಳು-		465. 12
(3) ಕಟ್ಟಡಗಳ ನಿರ್ಮಾಣ	-	1362.80

ಮಡಿಕೇರಿ ತಾಲ್ಲೂಕಿನ ಬಲಮುರಿಯಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿ

572 (591) ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿ ತಾಲ್ಲೂಕಿನ ಬಲಮುರಿಯಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿಗೆ ಇಲ್ಲಿಯವರೆಗೆ ಮಾಡಲಾಗಿರುವ ವೆಚ್ಚವೆಷ್ಟು ?

ಆ) ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು ?

ಇ) ಮಳೆಗಾಲದಲ್ಲಿ ಸಂಚಾರಕ್ಕೆ ತೀವ್ರ ಅಡಚಣೆ ಯಾಗುತ್ತಿರುವುದರಿಂದ ಅದನ್ನು ಸರ್ಕಾರ ಮುಂದಿನ ಜೂನ್ ತಿಂಗಳೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ರೂ. 134. 199 ಲಕ್ಷಗಳು. (ಜನವರಿ 1999ರ ಅಂತ್ಯದವರೆವಿಗೆ).